**ದಿನಾಂಕ:17-06-2022ರಂದು ಯೋಜನೆಯ "ಸರಕಾರಿ ಪ್ರೌಢ ಶಾಲೆ" ಹೆಮನೂರ ಗ್ರಾಮ, ತಾ॥ ಸುರಪುರ ಜಿ॥ ಯಾದಗಿರಿಯಲ್ಲಿ ಬೆಳಗ್ಗೆ 11.00ಗಂಟೆಗೆ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರುರವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಹೆಮನೂರ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಸರ್ವೆ ನಂ. 142/2, 157/2/2, 158/2, 160/3, 163/2, 164/2 & 165/2 ಹೆಮನೂರ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 58.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,93,783 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಯೋಜನೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುವ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಜರುಗಿದ ಪರಿಸರ ಸಾರ್ವಜನಿಕ ಆಲಿಕ ಸಭೆಯ ನಡುವಳಿಗಳು:**

**<u>ಹಾಜರಿದ್ದ ಅಧಿಕಾರಿಗಳು :</u>**

**ಶ್ರೀಯುತರು:**

**1) ಶ್ರೀ. ಶಂಕರಗೌಡ ಸೋಮನಾಳ, ಕೆ.ಎ.ಎಸ್. (ಆಯ್ಕೆ ಶ್ರೇಣಿ)**
**ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ**
**ಯಾದಗಿರಿ ಜಿಲ್ಲೆ, ಯಾದಗಿರಿ.**

**2) ಶ್ರೀ. ಮಧುಸೂದನ್,**
**ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ.**

**3) ಶ್ರೀ. ಕೆ.ರಾಜು, ಪರಿಸರ ಅಧಿಕಾರಿಗಳು,**
**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ**

**4) ಶ್ರೀ. ಸುಬ್ಬಣ್ಣ ಜಮಖಂಡಿ, ತಹಸೀಲ್ದಾರರು, ಸುರಪುರ**

*****

ಸಭೆಯ ಪ್ರಾರಂಭದಲ್ಲಿ ಶ್ರೀ ಕೆ. ರಾಜು, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕರಾಮಾನಿಮಂ, ಕಲಬುರಗಿ ಇವರನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಕೋರಿದರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಎಲ್ಲಾ ಸಿಬ್ಬಂದಿಗಳಿಗೆ, ಯೋಜನೆಯ ತಾಂತ್ರಿಕ ಸಿಬ್ಬಂಧಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ, ಮಾದ್ಯಮದವರಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ, ಸಮಸ್ತ ರೈತ ಬಾಂಧವರಿಗೆ ಮತ್ತು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಪರಿಸರ ಅಧಿಕಾರಿಗಳು, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಹೆಮನೂರ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಸರ್ವೆ ನಂ. 142/2, 157/2/2, 158/2, 160/3, 163/2, 164/2 & 165/2 ಹೆಮನೂರ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 58.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,93,783 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಸ್ಥಾಪಿಸಲು

ಉದ್ದೇಶಿಸಿರುವುದಕ್ಕೆ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಪ್ರಸ್ತಾಪಿಸಿರುವ ಯೋಜನೆಯ ಕುರಿತಾದ ಹಾಗೂ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು/ಸಲಹೆಗಳನ್ನು ಸ್ವೀಕರಿಸಲು, ದಿನಾಂಕ:17-06-2022ರಂದು "ಸರಕಾರಿ ಪ್ರೌಢ ಶಾಲೆ" ಹೆಮನೂರ ಗ್ರಾಮದಲ್ಲಿ, ಬೆಳಗ್ಗೆ 11.00ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಜಿಲ್ಲೆಯ ವಿವಿಧ ಕಛೇರಿಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ, ತಾಲೂಕ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ್ ಸುರಪುರ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ಗ್ರಾಮ ಪಂಚಾಯತಿ ಕಾರ್ಯಾಲಯ ಹೆಮನೂರ, ತಹಸೀಲ್ದಾರರು ಕಾರ್ಯಾಲಯ ಸುರಪುರ ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಾಕಾರಿ ಸಾರಾಂಶ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ), ಅಡಕ ಮುದ್ರಿಕೆ ಮತ್ತು ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ 30ದಿನಗಳ ಮುಂಚಿತವಾಗಿ ಇರಿಸಲಾಗಿತ್ತು ಎಂದು ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ **"ವಿಜಯ ಕರ್ನಾಟಕ"** & **"ಡೆಕ್ಕನ ಹೆರಾಲ್ಡ"** ದಿ:18-05-2022ರಂದು ಹಾಗೂ ಸ್ಥಳೀಯ ದಿನಪತ್ರಿಕೆಯಾದ **"ಕನ್ನಡಪ್ರಭ"**ದಲ್ಲಿ ದಿ:19-05-2022ರಂದು ಅಧಿಸೂಚನೆಯ ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಅಹ್ವಾನಿಸಲಾಗಿತ್ತು ಎಂದು ತಿಳಿಸುತ್ತಾ, ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭೆಯ ಆಧ್ಯಕ್ಷರು ಸಭೆಯನ್ನು ಉದ್ದೇಶಿಸುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರ ತಾಂತ್ರಿಕ ಸಲಹೆಗಾರರಿಗೆ ಉದ್ದೇಶಿತ ಯೋಜನೆಯ ತಾಂತ್ರಿಕ ವಿವರಗಳನ್ನು ಸಭೆಗೆ ಮಂಡಿಸುವಂತೆ ಸೂಚಿಸಿದರು. ಅದರಂತೆ, ಯೋಜನೆಯ ತಾಂತ್ರಿಕ ಸಲಹೆಗಾರರು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭಾಧ್ಯಕ್ಷರು ಯೋಜನೆಯನ್ನು ಸಂಕ್ಷಿಪ್ತವಾಗಿ ಸಾರ್ವಜನಿಕರಿಗೆ ವಿವರಿಸಿ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟೀಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಈ ಕೆಳಕಂಡ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು:

1. ಶ್ರೀ ಮಾರುತಿ ಹಾಲಗೇರ ಗ್ರಾಮ :- ಇವರು ಮಾತನಾಡುತ್ತಾ ಮೊದಲು ವರದಿಯನ್ನು ಯಾರು ತಯಾರಿಸಿದ್ದಾರೆ? ಇದರ ಬಗ್ಗೆ ಇಲ್ಲಿಯ ಜನರಿಗೆ ಪೂರ್ವ ಮಾಹಿತಿ ಇರುವುದಿಲ್ಲ ಇದನ್ನು ಮಾಲಿನ್ಯ ನಿಯಂತ್ರಣ ಅಧಿಕಾರಿಗಳ ಅಥವಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯವರಾ ಎಂದು ಪ್ರಶ್ನಿಸಿದರು.

➢ **ಯೋಜನೆದಾರರು** ಮಾತನಾಡುತ್ತಾ **ಯಾವುದೇ ಒಂದು ಮರಳು ಬ್ಲಾಕ್ ಸ್ಥಾಪನೆ ಮಾಡಬೇಕಾದರೆ ಮುಂಚಿತವಾಗಿ ಒಂದು ಅಧ್ಯಯನ ವರದಿಯನ್ನು ಸಿದ್ಧಪಡಿಸಬೇಕಾಗುತ್ತದೆ ಇದನ್ನು ಸರ್ಕಾರದಿಂದ** ಅನುಮೋದಿತ **ಪಡೆದ ಸಂಸ್ಥೆ** ವರಿಯನ್ನು ಸಿದ್ಧಪಡಿಸಬಹುದು **ಇದು NABL ಇಂದ** ಅನುಮೋದಿತ ಪಡೆದಿರುತ್ತದೆ. **ಇಲ್ಲಿ ಹಟ್ಟಿ ಚಿನ್ನದ** ಗಣಿ ಪರವಾಗಿ ಸಂಸ್ಥೆ ಅಧ್ಯಯನ **ನಡೆಸಿ** ವರದಿಯನ್ನು ನೀಡಿರುತ್ತಾರೆ.



ನಂದೀಶ್.

ಮುಂದುವರೆದು ಈ ಗ್ರಾಮದ ಸುತ್ತ ಮುತ್ತ ಗಿಡ ಮರಗಳು ಕಡಿಮೆ ಇದ್ದು, ಗಣಿಗಾರಿಕೆ ಮಡುವುದರಿಂದ ವ್ಯವಸಾಯದ ಭೂಮಿ ಕಡಿಮೆಯಾಗುತ್ತದೆ ಹಾಗೂ ಗಣಿಗಾರಿಕೆ ಮುಗಿದ ಮೇಲೆ ಇಲ್ಲಿಯ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬಿರಬಹುದು ಎಂದರು.

- **ಅಧ್ಯಕ್ಷರು ಮಾತನಾಡುತ್ತ ಇಲ್ಲಿ ಗಣಿಗಾರಿಕೆ ನಿಯಮಿತ ಮತ್ತು ಜವಬ್ದಾರಿತವಾಗಿ ಕಾಳಜಿಯಿಂದ ಮಾಡಬೇಕೆಂದು ಯೋಜನೆದಾರರಿಗೆ ಸೂಚಿಸಿದರು.**
- **ಯೋಜನೆದಾರರು ಮಾತನಾಡುತ್ತಾ ಗಣಿಗಾರಿಕೆಯನ್ನು ಮಾಡಬೇಕೆಂದರೆ ರಸ್ತೆ ಮತ್ತು ಅರಣ್ಯೀಕರಣ ಬಗ್ಗೆ ಕೆಲವು ನಿಯಮಗಳಿದ್ದು ಹಾಗೂ ಧೂಳು ಬರದ ಹಾಗೆ ನೂತನ ಮರಳು ನೀತಿ-2020 ಪ್ರತಿಯೊಬ್ಬರು ಅರಣ್ಯದ ಬಗ್ಗೆ ಕಾಳಜಿ ವಹಿಬೇಕಾಗುತ್ತದೆ ಇದಕ್ಕಾಗಿ ಹಟ್ಟಿ ಚಿನ್ನದ ಕಂಪನಿಯವರಿಗೆ ಲಕ್ಷಾಂತರ ರೂಪಾಯಿಯನ್ನು ಅರಣ್ಯೀಕರಣಗೋಸ್ಕರ ಕಾಯ್ದಿರಿಸಿದ್ದೇವೆ. ಧೂಳು ನಿಯಂತ್ರಣಕ್ಕಾಗಿ ಮರಳನ್ನು ಹಗಲಿನಲ್ಲಿ ಮಾತ್ರ ಟಾಪನ್ನು ಹೊದಿಸಿ ಸಾಗಿಸಲಾಗುತ್ತದೆ. ಹಟ್ಟಿ ಗೋಲ್ಡ್ ಕಂಪನಿಯು ಸರ್ಕಾರದ ಕಂಪನಿಯಾಗಿದ್ದು, ಗಣಿಗಾರಿಕೆಯಿಂದ ಯಾವುದೇ ಲಾಭದ ಉದ್ದೇಶವಿರುವುದಿಲ್ಲ ಇದರಿಂದ ಖಾಸಗಿ ಕಂಪನಿಯವರು ನಿಯಮ ಬಾಹಿರವಾಗಿ ನಡೆಸುವ ಕಾರ್ಯಕ್ಕೆ ಕಡಿವಾಣ ಬಿದ್ದಿದೆ ಎಂದರು. ಗಣಿಗಾರಿಕೆಯಿಂದ ಬರು ರಾಜಧನದ 25% ಮೊತ್ತವನ್ನು ಸರ್ಕಾರವು ಪಂಚಾಯಿತಿ/ಗ್ರಾಮಕ್ಕೆ ರಸ್ತೆ, ಅರಣ್ಯ, ಶಿಕ್ಷಣ ಮತ್ತು ಕುಡಿಯುವ ನೀರಿಗೋಸ್ಕರ ಉಪಯೋಗಿಸಬಹುದು ಎಂದು ತಿಳಿಸಿದರು.**
- **ಅಧ್ಯಕ್ಷರು ಮಾತನಾಡುತ್ತಾ ನಿಯಮ ಬದ್ದವಾಗಿ ಮಾಲಿನ್ಯ ನಿಯಂತ್ರಣ ಮಂಡಳಿ ಇಲಾಖೆಯವರು ಪ್ರತಿ ತಿಂಗಳು ಪರಿಶೀಲನಾ ವರದಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.**

  ಮುಂದುವರೆದು ಹೆಮನೂರು ಗ್ರಾಮದ ಪಕ್ಕದಲ್ಲಿರುವ ಕೊಳ್ಳುರು ಗ್ರಾಮವನ್ನು ಐತಿಹಾಸಿಕ ಸ್ಥಳವೆಂದು ಗುರುತಿಸಲಾಗಿದ್ದು, ಅಲ್ಲಿ ಮರಳುಗಾರಿಕೆಯನ್ನು ನಿಷೇದಿಸಲಾಗಿರುತ್ತದೆ. ಅದರಂತೆ ಈ ಗ್ರಾಮದಲ್ಲಿ ಹಳ್ಳಕಟಿ ಎಂಬಲ್ಲಿ ಶಿಲಾಶಾಸನ ಕಂಡುಬಂದಿದ್ದು, ಅದು ಕೂಡ ಈ ಸರ್ವೆ ನಂಬರ ವ್ಯಾಪ್ತಿಯಲ್ಲಿ ಬರುವುದರಿಂದ ಇದರ ಬಗ್ಗೆ ಅಧ್ಯಯನ ಮಾಡಬೇಕೆಂದು ಒತ್ತಾಯಿಸಿದರು.

2. <u>ಶ್ರೀ ಭೀಮರಾಯ ಯಮನೂರು ಗ್ರಾಮ:</u> ಇವರು ಮಾತನಾಡುತ್ತಾ ಹಳ್ಳ ಕಟ್ಟಿಯಿಂದ ಸಂಗಮದ ರಸ್ತೆಯವರೆಗೆ ಎಳ್ಳ ಅಮವಾಸೆ ಸಂದರ್ಭದಲ್ಲಿ ದೇವರುಗಳು ಗಂಗಾಸ್ನಾಕ್ಕೆ ಬರುತ್ತಿದ್ದು, ಅದೇಶ ಸ್ಥಳದಲ್ಲಿ ತಾವು ಮರಳುಗಾರಿಕೆ ಮಾಡುತ್ತಿದ್ದು, ಇದಕ್ಕೆ ನಮ್ಮ ಸಹಮತ ಇರುವುದಿಲ್ಲ ಹಾಗೂ ಧೂಳನ್ನು ಕಡಿಮೆ ಮಾಡಲು ಮತ್ತು ಮರಳನ್ನು ಸಾಗಿಸಲು ಬೇರೆ ರಸ್ತೆಯನ್ನು ನಿರ್ಮಿಸಿಕೊಳ್ಳಿ ಎಂದು ಒತ್ತಾಯಿಸಿದರು.

ಅಂತಿಮವಾಗಿ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಭೆಯಲ್ಲಿ ಶ್ರೀ ಮಾರುತಿ ಮತ್ತು ಭೀಮರಾಯ ಹೆಸರನ್ನು ಪ್ರಸ್ಥಾಪಿಸಿ ಈ ಯೋಜನೆಗೆ ಸಂಬಂಧಿಸಿದಂತೆ ವ್ಯಕ್ತವಾದ ಅನಿಸಿಕೆಗಳನ್ನು/ಅಭಿಪ್ರಾಯಗಳನ್ನು ಸಾರಾಂಶವನ್ನು ಮತ್ತೊಮ್ಮೆ ಸಭೆಗೆ ತಿಳಿಸುತ್ತಾ ಗ್ರಾಮದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಲಾಗುವುದು ಎಂದು ತಿಳಿಸುತ್ತಾ ಸದರಿ ಸಭೆಯ ನಡುವಳಿಗಳೊಂದಿಗೆ ಯಥಾವತ್ತಾಗಿ ಬರೆದು ವಿಡಿಯೋ ಮತ್ತು ಛಾಯಾಚಿತ್ರಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.

ಶ್ರೀ ಶಂಕರಗೌಡ ಸೋಮನಳ

ಕೆ.ಎ.ಎಸ್. (ಆಯ್ಕೆ ಶ್ರೇಣಿ)

ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು

ಪರಿಸರ ಸಾರ್ವಜನಿಕ ಸಭೆ, ಯಾದಗಿರಿ

ತಾ॥ & ಜಿ॥ ಜಿಲ್ಲೆ ಯಾದಗಿರಿ.